
ಕಲೆ: ರಾಮಗೌತಮ

# ಮನವೆಂಬ ಮರ್ಕಟ

**ಸಾಧಕ**ನೊಬ್ಬನು ಮನೆಯ ಗದ್ದಲ ಗೊಂದಲಗಳಿಂದ ದೂರ ಹೋಗಿ, ಒಂದು ಕಾಡಿನೊಳಗೆ, ಮರದ ಕೆಳಗೆ, ಧ್ಯಾನಸ್ಥನಾಗಿ ಕುಳಿತಿದ್ದನು. ಅವನ ದೇಹ ಸ್ಥಿರವಾಗಿದ್ದರೂ ಮನಸ್ಸು ಅಸ್ಥಿರವಾಗಿತ್ತು. ಅವನು ಎಷ್ಟೇ ಪ್ರಯತ್ನಿಸಿದರೂ ತನ್ನ ಚಂಚಲ ಮನಸ್ಸನ್ನು ಭಗವಂತನಲ್ಲಿ ಹಿಡಿದಿರಿಸಲು ಸಾಧ್ಯವಾಗಲಿಲ್ಲ.

ಮನಸ್ಸನ್ನು ಮಂಗನಿಗೆ ಹೋಲಿಸಿರುವುದು ಅವನ ನೆನಪಿಗೆ ಬಂತು. ಚಂಚಲ ಸ್ವಭಾವದ ಮಂಗನಿಗೆ ಯಾರೋ ಮದ್ಯವನ್ನು ಕುಡಿಸುತ್ತಾರೆ. ಅನಂತರ ಒಂದು ಚೇಳು ಅದನ್ನು ಕಡಿಯುತ್ತದೆ. ಇದಿಷ್ಟೇ ಸಾಲದೆಂಬಂತೆ ಒಂದು ಭೂತ ಅದನ್ನು ಮೆಟ್ಟಿಕೊಳ್ಳುತ್ತದೆ. ಇಂತಹ ಮಂಗನ ಸ್ಥಿತಿಯನ್ನು ಅವನು ಚಿಂತಿಸುತ್ತಿದ್ದ. ಇದರ ಪರಿಣಾಮವಾಗಿ ಅವನ ಮನಸ್ಸು ಇನ್ನಷ್ಟು ಚಂಚಲವಾಗಿ, ಸಹಿಸಲಾಗದೆ ಕಣ್ತೆರೆದ. ನೋಡುತ್ತಾನೆ, ಅವನ ಎದುರುಗಡೆಯೇ ಇನ್ನೊಂದು ಮರದ ಕೆಳಗೆ ಒಂದು ಮಂಗ ಕುಳಿತುಕೊಂಡಿತ್ತು!

ಆಶ್ಚರ್ಯವೇನೆಂದರೆ ಅದು ಇವನಂತೆಯೇ ಕಣ್ಮುಚ್ಚಿ ಧ್ಯಾನಮಗ್ನವಾಗಿತ್ತು. ಅವನು ಭಾವಿಸಿದ, **ಮರ್ಕಟ ಧ್ಯಾನ**ವೆಂದರೆ ಇದೇ ಇರಬಹುದೆಂದು. ಅವನಿಗೆ ಶ್ರೀರಾಮಕೃಷ್ಣರು ಹೇಳಿದ ಕಥೆ ನೆನಪಿಗೆ ಬಂತು. ಮಂಗಗಳು ಕೆಲವೊಮ್ಮೆ ಕಣ್ಮುಚ್ಚಿ ಧ್ಯಾನ ಮಾಡುತ್ತ ಶಾಂತವಾಗಿ ಕುಳಿತಿರುತ್ತವೆ. ಆಗ ಅವು ಯಾವ ತೋಟದಲ್ಲಿ ಹಣ್ಣು ಜಾಸ್ತಿ ಇದೆ, ಯಾವ ತೋಟಕ್ಕೆ ನುಗ್ಗೋಣ ಎಂದೆಲ್ಲ ಯೋಚಿಸುತ್ತಿರುತ್ತವೆ. ಈ ಮಂಗನೂ ಅದೇ ರೀತಿ ಆಲೋಚಿಸುತ್ತಿರಬಹುದೆಂದು ಅವನು ಭಾವಿಸಿದ.

ಪರೀಕ್ಷಿಸುವುದಕ್ಕಾಗಿ ಒಂದು ಹಣ್ಣನ್ನು ಕಿತ್ತು ತಂದು ಬಹಳ ಎಚ್ಚರಿಕೆಯಿಂದ ಅದರ ಕೈಮೇಲೆ ಇಟ್ಟನು. ಮಂಗವು ಕೆಲವು ಕ್ಷಣಗಳ ನಂತರ ನಿಧಾನವಾಗಿ ಕಣ್ಣು ತೆರೆಯಿತು. ಒಮ್ಮೆ ಹಣ್ಣಿನ ಕಡೆ ದೃಷ್ಟಿ ಹರಿಸಿತು. ಅದರ ಮುಖ ಆನಂದದಿಂದ ಅರಳಿತು. ನಿಧಾನವಾಗಿ ಹಣ್ಣನ್ನು ಕೈಯಲ್ಲಿ ತೆಗೆದುಕೊಂಡಿತು. ಇದೆಲ್ಲವನ್ನೂ ಕುತೂಹಲದಿಂದ ನೋಡುತ್ತ ಹತ್ತಿರದಲ್ಲಿಯೇ ನಿಂತಿದ್ದ ಸಾಧಕನ ಕಡೆ ತನ್ನ ದೃಷ್ಟಿ ಹರಿಸಿತು. ಆ ದೃಷ್ಟಿಯಲ್ಲಿ ವ್ಯಂಗ್ಯಭಾವವಿತ್ತು.

ಆ ಹಣ್ಣನ್ನು ಅವನಿಗೇ ಕೊಡಲು ಕೈ ಚಾಚಿತು. ಅವನೂ ತನ್ನರಿವಿಲ್ಲದಂತೆಯೇ ಕೈ ನೀಡಿದ. ಆಗ ಅವನಿಗೆ ಈ ಕೆಳಗಿನ ಹಾಡು ನೆನಪಿಗೆ ಬಂತು :

ಯಾವ ಫಲ ಬೇಕು ಎನಗೆ,
ಜನ್ಮಸಫಲವ ಗೈವ ಫಲವಿರಲು ಸುಮ್ಮಗೆ ?
ಮೋಕ್ಷಫಲಗಳ ಬಿಡುವ ಶ್ರೀರಾಮ ತರುವಿಹುದು
ಎನ್ನ ಎದೆಯೊಳಗೆ.
ಶ್ರೀರಾಮ ಕಲ್ಪತರು ಮೂಲದಲಿ ನಾ ಕುಳಿತು
ಬೇಕಾದ ಫಲಗಳನು ಪಡೆಯುತಿರುವೆ.
ಪ್ರತಿಫಲವ ನಾ ಬಯಸೆ, ಜಗದ ಕಹಿ ಫಲಗಳನು
ನಿಮ್ಮೊಂದಿಗೇ ಬಿಟ್ಟು ಮುನ್ನಡೆಯುವೆ.

(ಆಂಜನೇಯನು ರಾವಣನ ಪ್ರಾಣಪಕ್ಷಿಯನ್ನು ತೆಗೆದುಕೊಂಡು ಓಡಿಹೋಗುತ್ತಿರುವಾಗ, ಮಂಡೋದರಿಯು ಅವನ ಹಿಂದೆ ಹೋಗಿ ಹಣ್ಣನ್ನು ತೆಗೆದುಕೊಂಡು ಪ್ರಾಣಪಕ್ಷಿಯನ್ನು ಹಿಂದಿರುಗಿಸೆಂದು ಬೇಡಿದಾಗ, ಆಂಜನೇಯನು ಹಾಡುವ ಹಾಡು.)

ಧ್ಯಾನಾಭ್ಯಾಸದ ಮೂಲಕ ಮಂಗನ ಮನಸ್ಸೂ ಯೋಗಿಯ ಮನಸ್ಸಾಗಬಲ್ಲದು. ❑